# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಾರ್ಕಳ

ದಿನಾಂಕ 18 ನೇ ನವೆಂಬರ್ 2025 ನೇ ಇಸವಿ

**ಕ್ರಿಮಿನಲ್ ಮೊಕದ್ದಮೆ ಕ್ರಮಾಂಕಃ 544/2024**

ರಾಜ್ಯ ಸರ್ಕಾರದ ಪರವಾಗಿ,
ಪೋಲಿಸ್ ಉಪ ನಿರೀಕ್ಷಕರು,
ಕಾರ್ಕಳ ನಗರ ಪೋಲಿಸ್ ಠಾಣೆ,
ಕಾರ್ಕಳ, ಉಡುಪಿ ಜಿಲ್ಲೆ. .... ಪಿರ್ಯಾದುದಾರರು.

\- ವಿರುದ್ಧ -

ಜಗದೀಶ ಪೂಜಾರಿ,
ಪ್ರಾಯಃ 42 ವರ್ಷ,
ತಂದೆಃ ತಿಮ್ಮಪ್ಪ ಪೂಜಾರಿ,
ವಾಸಃ ಕೊಂಕಣಬೆಟ್ಟು, ಮಿಯ್ಯಾರು ಗ್ರಾಮ,
ಕಾರ್ಕಳ ತಾಲೂಕು, ಉಡುಪಿ ಜಿಲ್ಲೆ. ... ಆರೋಪಿ.

## ದೋಷಾರೋಪಣೆ

ಶ್ರೀಮತಿ ಕೋಮಲ ಆರ್.ಸಿ, ಬಿ.ಎ., ಎಲ್‌ಎಲ್.ಬಿ., ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯಾದ ನಾನು ಈ ಮೇಲ್ಕಂಡ ನಿಮ್ಮನ್ನು ಕೆಳಕಂಡಂತೆ ದೋಷಾರೋಪಿಸುತ್ತೇನೆ.

ಆರೋಪಿಯಾದ ನೀವು ದಿನಾಂಕ 18.12.2023 ಮತ್ತು 27.12.2025 ರಂದು ಸಂಜೆ ಸಮಯ ಸುಮಾರು 6.00 ಗಂಟೆಗೆ ಸಾಕ್ಷಿ-1ನೇಯವರು ಕಾರ್ಕಳ ಕಸಬಾ ಗ್ರಾಮದ ಗೋಪಾಲ್ ಟವರ್ಸ್ ನಲ್ಲಿರುವ ಶ್ರೀರಾಮ್ ಫೈನಾನ್ಸ್ ನಲ್ಲಿ ಕೆಲಸ ಮುಗಿಸಿ ಬರುತ್ತಿರುವಾಗ ನೀವು ಸಾಕ್ಷಿ-1ನೇಯವರನ್ನು ದುರುದ್ದೇಶದಿಂದ ಹಿಂಬಾಲಿಸಿ ವಿನಾಕಾರಣಾ ಮಾತನಾಡಿಸಿ ಕಿರುಕುಳ ನೀಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ **354(ಡಿ)** ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುವಂತೆ ಅಪರಾಧವನ್ನು ಮಾಡಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

ಮೇಲ್ಕಂಡ ದೋಷಾರೋಪಣಗಳಿಗೆ ನೀವು ಈ ನ್ಯಾಯಾಲಯದಿಂದ ಅಧಿವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

(ಆರೋಪಿಗೆ ಮೇಲಿನ ದೋಷಾರೋಪಣೆಯನ್ನು ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ವಿವರಿಸಿದ್ದು, ಅವರು ಅದನ್ನು ಸರಿಯಾಗಿ ತಿಳಿದುಕೊಂಡು ಉತ್ತರಿಸಿದ್ದಾರೆ ಎಂಬುದಾಗಿ ಈ ಮೂಲಕ ದೃಢೀಕರಿಸುತ್ತೇನೆ. )

(ಕೋಮಲ ಆರ್.ಸಿ)
ಪ್ರ ಸಿ ನ್ಯಾ ಮತ್ತು ಪ್ರ ದ ನ್ಯಾ ದಂ.,
ಕಾರ್ಕಳ.